ಅನುಬಂಧ– 6

2–8–2012ರ ಚುಕ್ಕೆ ಗುರುತಿನ ಮತ್ತು ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ನೀಡಲಾದ ಉತ್ತರಗಳು

'ಆನ್‌ಲೈನ್' ಮೂಲಕ ಪಡಿತರ ಚೀಟಿ

106 (199) ಶ್ರೀ ಖಾದರ್ ಯು.ಟಿ. (ಮಂಗಳೂರು) : ಮಾನ್ಯ ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ:–

ಅ) ಪಡಿತರ ಚೀಟಿಗಾಗಿ ಆನ್‌ಲೈನ್ ಮೂಲಕ ಅರ್ಜಿಸಲ್ಲಿಸಿ 7 ತಿಂಗಳು ಕಳೆದಿದ್ದರೂ ಇದುವರೆವಿಗೂ ಸಾರ್ವಜನಿಕರಿಗೆ ರೇಷನ್ ಕಾರ್ಡ್‌ನೀಡದೇ ಇರುವ ಕಾರಣಗಳೇನು; ಆನ್‌ಲೈನ್ ಮೂಲಕ ಇದುವರೆವಿಗೂ ಬಂದಿರುವ ಅರ್ಜಿಗಳು ಎಷ್ಟು;

ಆ) ದಕ್ಷಿಣ ಕನ್ನಡ ಜಿಲ್ಲೆ ಮಂಗಳೂರು ವಿಧಾನ ಸಭಾ ಕ್ಷೇತ್ರದಲ್ಲಿರುವ AAY, BPL ಮತ್ತು APL ಪಡಿತರ ಚೀಟಿಗಳ ಸಂಖ್ಯೆ ಎಷ್ಟು?

ಶ್ರೀ. ಡಿ.ಎನ್. ಜೀವರಾಜ್ (ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಸಚಿವರು) :

ಅ) 'ಆನ್‌ಲೈನ್' ಆಗಿ ಹೊಸ ಪಡಿತರ ಚೀಟಿಗಾಗಿ ದಿನಾಂಕ: 30.7.2012 ರವರೆಗೆ ಸಲ್ಲಿಸಲಾದ ಅರ್ಜಿಗಳಿಗೆ ನೀಡಲಾದ ಪಡಿತರ ಚೀಟಿ ಹಾಗೂ ಉಳಿದ ಅರ್ಜಿಗಳ ಸ್ಥಿತಿಯ ವಿವರ ಈ ಕೆಳಕಂಡಂತಿದೆ:

ಅರ್ಜಿಗಳ ಸ್ಥಿತಿ	ಒಟ್ಟು
ಸ್ವೀಕರಿಸಿದ ಅರ್ಜಿಗಳು	31,09,848
ಫೋಟೋ ಮತ್ತು ಬೆರಳಚ್ಚು ಬಯೋಮೆಟ್ರಿಕ್‌ಗೆ ಅನುಮೋದಿಸಲಾದ ಅರ್ಜಿಗಳು	10,77,324
ಫೋಟೋ ಮತ್ತು ಬೆರಳಚ್ಚು ಬಯೋಮೆಟ್ರಿಕ್ ನೀಡಿದ ಅರ್ಜಿಗಳು	1,68,126
ನೀಡಲು ಸಿದ್ಧವಾಗಿರುವ ಪಡಿತರ ಚೀಟಿಗಳು.	35,300
ನೀಡಲಾದ ಪಡಿತರ ಚೀಟಿಗಳು	73,454
ತಿರಸ್ಕರಿಸಿದ ಅರ್ಜಿಗಳು	4,98,977

ಈಗಾಗಲೇ ಬಂದಿರುವ 31,09,848 ಅರ್ಜಿಗಳ ಪೈಕಿ 10,77,324 ಅರ್ಜಿಗಳನ್ನು ಅನುಮೋದಿಸಿ 4,98,977 ಅರ್ಜಿಗಳನ್ನು ತಿರಸ್ಕರಿಸಿ ಇಲಾಖೆ ಕ್ರಮಕೈಗೊಂಡಿರುವುದನ್ನು ಗಮನಿಸಿದಾಗ, ಅಲ್ಪಾವಧಿಯಲ್ಲಿಯೇ ಗಣನೀಯ ಪ್ರಗತಿ ಸಾಧಿಸಿರುವುದನ್ನು ಗಮನಿಸಬಹುದು. ಅನುಮೋದಿಸಲ್ಪಟ್ಟ ಅರ್ಜಿಗಳ ಪೈಕಿ ಈವರೆಗೆ 1,68,126 ಕುಟುಂಬಗಳು ಮಾತ್ರ ಫೋಟೋ ಮತ್ತು ಬೆರಳಚ್ಚು ಬಯೋಮೆಟ್ರಿಕ್ ನೀಡಲು ಮುಂದೆ ಬಂದಿರುವುದೇ ರೇಷನ್ ಕಾರ್ಡ್ ನೀಡುವಲ್ಲಿ ತಡವಾಗಲು ಮುಖ್ಯಕಾರಣವಾಗಿರುತ್ತದೆ. ಪ್ರಾರಂಭದಲ್ಲಿ ಸಲ್ಲಿಸಿದ್ದ ಅರ್ಜಿಗಳು ನಿರ್ಣಯವಾಗದೆ ಉಳಿದಿದ್ದಲ್ಲಿ ಅಂತಹ ಅರ್ಜಿಗಳನ್ನು ಆದ್ಯತೆಯ ಮೇಲೆ ಪರಿಶೀಲಿಸಿ, ನಿರ್ಣಯ ತೆಗೆದುಕೊಳ್ಳಲು ಸಂಬಂಧಿಸಿದ ಅಧಿಕಾರಿಗಳಿಗೆ ನಿರ್ದೇಶನ ನೀಡಲಾಗಿದೆ.

ಆ)

ವಿಧಾನಸಭಾ ಕ್ಷೇತ್ರದ ಹೆಸರು	ಬಿಪಿಎಲ್	ಎಪಿಎಲ್	ಎಎವೈ	ಒಟ್ಟು
ಮಂಗಳೂರು	19342	22684	1531	43557

ವಾಹನಗಳಿಗೆ ಟಿಂಟೆಡ್ ಗ್ಲಾಸ್‌ನ್ನು ತೆಗೆಸುವುದು

107 (242) ಶ್ರೀ ಸುರೇಶ್‌ಗೌಡ (ನಾಗಮಂಗಲ) : ಮಾನ್ಯ ಉಪ ಮುಖ್ಯಮಂತ್ರಿ (ಗೃಹ ಮತ್ತು ಸಾರಿಗೆ) ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ:–

ಅ) ವಾಹನಗಳಿಗೆ ಟಿಂಟೆಡ್ ಗ್ಲಾಸನ್ನು ತೆಗೆಯುವ ಕಾರ್ಯ ಕ್ರಮವನ್ನು ಎಂದಿನಿಂದ ಜಾರಿಗೆ ತರಲಾಗಿದೆ? ಕಾನೂನನ್ನು ಉಲ್ಲಂಘಿಸಿದ ವರಿಂದ ಎಷ್ಟು ದಂಡ ವಸೂಲಿಸಲಾಗಿದೆ?

ಆ) ಬಿ.ಎಂ.ಟಿ.ಸಿ./ಐರಾವತ ಮತ್ತಿತರ ಸರ್ಕಾರಿ ಸಂಸ್ಥೆಗಳ ಬಸ್ಸುಗಳಿಗೆ ಸದರಿ ಕಾಯ್ದೆಯಿಂದ ವಿನಾಯಿತಿ ನಿಡಲಾಗಿದೆಯೇ? ನೀಡದೇ ಇದ್ದಲ್ಲಿ ಈ ಸಂಸ್ಥೆಗಳ ಬಸ್ಸುಗಳಲ್ಲಿ ಈಗಲೂ ಟಿಂಟೆಡ್ ಗ್ಲಾಸ್ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ? ಇದನ್ನು ತೆಗೆಸಲು ಯಾವ ಕ್ರಮವನ್ನು ವಹಿಸಲಾಗುವುದು? ಕಾನೂನನ್ನು ಉಲ್ಲಂಘಿಸಿ ಸದರಿ ಬಸ್ಸುಗಳು ಸಂಚರಿಸುತ್ತಿದ್ದಲ್ಲಿ ಯಾರ ವಿರುದ್ಧ ಕ್ರಮವನ್ನು ಕೈಗೊಳ್ಳಲಾಗಿದೆ?